ಇಂದು ದಿನಾಂಕ 24-06-2026 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**<u>ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರವಾಗಿಃ ಶ್ರೀ ಎ.ವಿ.ಎನ್. ವಕೀಲರಿಂದಃ</u>**

**3.** ಡಿಸ್ಚಾರ್ಜ ಸಮ್ಮರಿಯನ್ನು ಹಾಜರುಪಡಿಸಿದ್ದು ಅದನ್ನು ನಿ .ಪಿ.9 ಎಂದು, ಒಟ್ಟೂ ರೂ. 32,204-00 ರೂಪಾಯಿಗಳ ಒಟ್ಟೂ 15 ಮೆಡಿಕಲ್ ಬಿಲ್ ಹಾಗೂ 10 ಕ್ಯಾಶ ಮೆಮೊ ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ದಿನಾಂಕ 13-12-2023 ರ (ಸೀರಿಯಲ್ ನಂ. 21) 2 ನೇ ಎದುರುದಾರರ ಪರ ವಕೀಲರ ಆಕ್ಷೇಪಣೆಯ ಮೇರೆಗೆ ರುಜುವಾತುಪಡಿಸುವ ಷರತ್ತಿನ ಮೇರೆಗೆ ನಿ .ಪಿ. 10 ರಿಂದ ನಿ.ಪಿ. 34 ಎಂದು ಗುರುತಿಸಲಾಯಿತು. ಮೆಡಿಕಲ್ ಸರ್ಟಿಫಿಕೇಟನ್ನು ಹಾಜರುಪಡಿಸಿದ್ದು ಅದನ್ನು 2 ನೇ ಎದುರುದಾರರ ಪರ ವಕೀಲರ ಆಕ್ಷೇಪಣೆಯ ಮೇರೆಗೆ ರುಜುವಾತುಪಡಿಸುವ ಷರತ್ತಿನ ಮೇರೆಗೆ ನಿ .ಪಿ. 35, ಅರ್ಜಿದಾರರ ಆಧಾರಕಾರ್ಡಿನ ನೋಟರೈಜ್ ಕಾಪಿಯನ್ನು ಹಾಜರುಪಡಿಸಿದ್ದು ಅದನ್ನು ನಿ .ಪಿ. 36 ಎಂದು, ಪಿ.ಡಬ್ಲ್ಯುಡಿ. ಇವರಿಂದ ನೀಡಲಾದ ಲೈಸನ್ಸನ ನೋಟರೈಜ್ ಕಾಪಿಯನ್ನು ಹಾಜರುಪಡಿಸಿದ್ದುಅದನ್ನು ನಿ.ಪಿ. 37 ಎಂದು, 2023 -2024, 2022-23, 2021-22, 2020-21, 2019-20 ಸಾಲಿನ ಇನಕಮ್ ಟ್ಯಾಕ್ಸ ರಿಟರ್ನ್ಸನ ನೋಟರೈಜ್ ಕಾಪಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು 2 ನೇ ಎದುರುದಾರರ ಪರ ವಕೀಲರ ಆಕ್ಷೇಪಣೆಯ ಮೇರೆಗೆ ಕ್ರಮವಾಗಿ ನಿ.ಪಿ. 38 ರಿಂದ ನಿ.ಪಿ. 42 ಎಂದು ಗುರುತಿಸಲಾಯಿತು. ಪಾನ್ ಕಾರ್ಡ ಹಾಗೂ ಡಿ .ಎಲ್. ನ ನೋಟರೈಜ್ ಪ್ರತಿಗಳನ್ನು ನಿ.ಪಿ. 43 ಮತ್ತು ನಿ.ಪಿ. 44 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ 2 ನೇ ಎದುರುದಾರರ ಪರ ವಕೀಲರ ವಿನಂತಿ ಮೇರೆಗೆ ಪಾಟೀ ಸವಾಲು ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾದಂ.
ಕುಮಟಾ